ಒ ಎಸ್ 266/2023 ಪಿ.ಡಬ್ಲ್ಯೂ:1

ಇಂದು ದಿಃ 24.02.2026 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ

ನನಗೆ ಓದಲು ಮತ್ತು ಬರೆಯಲು ಬರುತ್ತದೆ. ಆಸ್ತಿಯಲ್ಲಿ ಭಾಗ ಬೇಕು ಎಂದು ನಾನು ನನ್ನ ತಂದೆ ಮತ್ತು ತಮ್ಮನ ವಿರುದ್ದ ದಾವೆ ಹಾಕಿದ್ದೇನೆ. ಪ್ರಕರಣದ ಮಾಹಿತಿಯನ್ನು ನಾನೇ ಕೊಟ್ಟಿರುತ್ತೇನೆ. ದಾವಾ ಆಸ್ತಿಗೆ ಸಂಬಂಧಿಸಿದಂತೆ ದಿನಾಂಕ 04.03.2021ರಲ್ಲಿ ನನ್ನ ತಂದೆ ಮತ್ತು ತಮ್ಮಂದಿರ ನಡುವೆ ಆಸ್ತಿ ವಿಭಾಗ ಅಗಿ ನೊಂದಾಯಿತ ವಿಭಾಗ ಪತ್ರವು ದಿನಾಂಕ 06.03.2021ರಂದು ಆಗಿದೆ ಎಂದರೆ ಸರಿ ಆದರೆ ನಮಗೆ ಗೊತ್ತಿಲ್ಲದ ರೀತಿ ಮಾಡಿದ್ದಾರೆ ಎನ್ನುತ್ತಾರೆ. ನಿಪಿ 11 ರ ವಿಭಾಗ ಪತ್ರದಲ್ಲಿ ನನ್ನ ಸಹಿ ಇದೆ. ವಿಭಾಗ ಪತ್ರದ ವಿವರಗಳನ್ನು ಓದಿ ತಿಳಿದು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ ಅಡಮಾಣ ಇಡುತ್ತೇವೆ ಎಂದು ಸಾಹಿ ಮಾಡಿಸಿದ್ದಾರೆ ಎನ್ನುತ್ತಾರೆ. ನಾನು, ನನ್ನ ತಂಗಿ ಮತ್ತು ತಂದೆ ರೂ 50 ಸಾವಿರ ಪಡೆದುಕೊಂಡು ದಾವಾ ಆಸ್ತಿಯಲ್ಲಿ ವಿಭಾಗವನ್ನು ಪ್ರತಿವಾದಿಗೆ ಬಿಟ್ಟುಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ನಿಪಿ 11 ರ ವಿಭಾಗ ಪತ್ರದ ಬಗ್ಗೆ ಸಂಪೂರ್ಣ ಮಾಹಿತಿ ಇದ್ದರೂ ಸಹ ಅಡಮಾನ ಪತ್ರ ಮಾಡಿಸಿಕೊಂಡರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಮದುವೆಯನ್ನು ಚಿನ್ನಾಭರಣ ಕೊಟ್ಟು ಅದ್ದೂರಿಯಾಗಿ ಮಾಡಿದ್ದಾರೆ ಎಂದರೆ ಸರಿಯಲ್ಲ. ನಿಪಿ 11 ರ ರೀತಿ ನಾನು ಆಸ್ತಿಯಲ್ಲಿ ಹಣದ ರೂಪದಲ್ಲಿ ವಿಭಾಗ ಪಡೆದುಕೊಂಡಿದ್ದರೂ ಸಹ ಪ್ರತಿವಾದಿಗಳ ವಿರುದ್ದ ದುರ್ಲಾಭ ಪಡೆಯಲು ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ವಿಭಾಗ ಪತ್ರದ ಜೊತೆ ಅಡಮಾನ ಪತ್ರವನ್ನು ಸೇರಿಸಿ ಸಹಿ ಪಡೆದರು ಎಂದು 2023ರಲ್ಲಿ ಗೊತ್ತಾಯಿತು. ವಿಭಾಗವಾದ ವಿಚಾರವು 2021ರಲ್ಲಿ ಗೊತ್ತಾದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ನನ್ನ ತಮ್ಮಂದಿರೇ ವ್ಯವಸಾಯ ಮಾಡುತ್ತಿದ್ದಾರೆ ಮತ್ತು ಅವರ ಹೆಸರಿನಲ್ಲಿ ಖಾತೆ ಮುಂದುವರೆಯುತ್ತಿದೆ. 2 ಮತ್ತು 3ನೇ ಪ್ರತಿವಾದಿಗಳು ಬ್ಯಾಂಕ್ ನಿಂದ ಸಾಲ ಪಡೆದು ವ್ಯವಸಾಯ ಮಾಡಿ ಜಮೀನನ್ನು ಅಭಿವೃದ್ಧಿಪಡಿಸಿದ್ದಾರೆ. ಈಗಾಗಲೇ ವಿಭಾಗವಾಗಿದ್ದರೂ ಸಹ ಪ್ರತಿವಾದಿಗಳ ವಿರುದ್ದ ದುರ್ಲಾಭ ಪಡೆಯಲು ಸುಳ್ಳು ದಾವೆ ಸಲ್ಲಿಸಿದ್ದೇನೆ ಮತ್ತು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.
ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ನಂಜನಗೂಡು.